# ವಾಪಸ್ಸು ಕೊಡಲಿಲ್ಲ



ಪತ್ನಿ ಗಿರಿಜಳೊಂದಿಗೆ ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಮಗಳು ಅಪೂರ್ವಳಿಗೆ ಉಲ್ಲನ್ ಟೋಪಿಯನ್ನು ಖರೀದಿಸುತ್ತಿದ್ದಾಗ ಆಂಟಿಯೊಬ್ಬರು ನಮ್ಮ ಎದುರು ಇದ್ದ ಅಂಗಡಿಯಲ್ಲಿ ತಮಗೆ ಬೇಕಾದ ವಸ್ತುವನ್ನು ಖರೀದಿಸಿ ಹೊರಗೆ ಬಂದರು. ಅವರನ್ನು ಕಂಡ ನನ್ನ ಪತ್ನಿ 'ನಮಸ್ಕಾರ ಹೇಗಿದ್ದೀರಿ' ಎಂದು ಕೇಳಿದಾಗ ಆ ಆಂಟಿ ಏನೂ ಹೇಳದೆ ಹಾಗೇ ನಮ್ಮ ಮುಂದೆ ನಡೆದುಹೋದರು. ನನಗೆ ಆಶ್ಚರ್ಯವೆನಿಸಿ 'ಯಾರು ಅವರು ನಿನ್ನ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಹೇಳದೆ ಹಾಗೇ ಹೋಗ್ತಿದಾರೆ' ಎಂದು ನನ್ನವಳನ್ನು ಕೇಳಿದೆ. ಅದಕ್ಕೆ ಉತ್ತರವಾಗಿ 'ಹೋ ಅವರಾ, ನಾವು ಯಡಿಯೂರಿನಲ್ಲಿದ್ದಾಗ ನಮ್ಮ ಮನೆ ಪಕ್ಕದಲ್ಲಿದ್ದವರು. ನಮ್ಮಿಂದ ಪಡೆಯುತ್ತಿದ್ದ ಸಕ್ಕರೆ, ಕಾಫಿಪುಡಿಯನ್ನೇ ವಾಪಸ್ ಕೊಡುತ್ತಿರಲಿಲ್ಲ. ಇನ್ನು ನನ್ನ ನಮಸ್ಕಾರವನ್ನು ವಾಪಸ್ಸು ಕೊಡುತ್ತಾರ' ಎಂದು ಹೇಳಿದಳು.

**ವಿ. ಹೇಮಂತಕುಮಾರ್, ಬೆಂಗಳೂರು**

# ಅತಿಥಿ ದೇವೋಭವ

ನಮ್ಮ ನಾದಿನಿಯ ಮಗ, ಏಳನೆಯ ತರಗತಿಯಲ್ಲಿ ಓದುತ್ತಿರುವ ಚಿನ್ಮಯ್ ಬಹಳ ಬುದ್ಧಿವಂತ. ಅವನ ಜಾಣ್ಮೆಯ ಮಾತುಗಳಿಗೆ ಮರುಳಾಗದವರಿಲ್ಲ. ಕೆಲವು ದಿನಗಳ ಹಿಂದೆ ಮಂಗಳೂರಿಗೆ ನಾದಿನಿಯ ಮನೆಗೆ ಹೋಗಿದ್ದೆವು. ರಜಾದಿನವಾದ ಕಾರಣ ಚಿನ್ಮಯ್ ಟೀವಿ ನೋಡುತ್ತಾ ಕುಳಿತಿದ್ದ. ನಮ್ಮ ಮನೆಯವರು 'ನ್ಯೂಸ್' ನೋಡೋಣ ಕಣೋ ಸ್ವಲ್ಪ ಹೊತ್ತು ಎಂದು ಅವನನ್ನು ಕೇಳಿದರು. 'ಆಯ್ತು ಸತ್ಯಮಾವ. ಅತಿಥಿದೇವೋಭವ, ನಿಮಗೆ ಯಾವ್ದು ಬೇಕೋ ನೋಡ್ಕೊಳ್ಳಿ' ಎಂದು ಆಡಲು ಹೊರಗೆ ಹೋದ.



ಚಿತ್ರಗಳು: ಗಣೇಶ್ ಆಚಾರ್ಯ

ಮರುದಿನ ಮತ್ತೆ ಅದೇ ರೀತಿ ನಮ್ಮ ಮನೆಯವರು ಕೇಳಿದರು. ಅದಕ್ಕೆ ಚಿನ್ಮಯ್ 'ಮೊದಲ್ನೇ ದಿನ ನೀವು ಅತಿಥಿ, ಅದಕ್ಕೆ ಬಿಟ್ಟು ಕೊಟ್ಟೆ. ಇವತ್ತು ನೀವು ಅತಿಥಿ ಅಲ್ಲ ಮನೆಯವರು. ಹಾಗಾಗಿ ನನಗೆ ಬೇಕಾದ ಚಾನಲ್ ನೋಡೋಕೆ ಬಿಟ್ಟುಕೊಟ್ಟು ನೀವು ಸುಮ್ಮನಿರಬೇಕು' ಎನ್ನುವುದೇ?!

**ಬಿ.ಎಸ್. ರಾಜಲಕ್ಷ್ಮಿ, ಹಾಸನ**